ಭಯ ಬೀಳಿಸುತ್ತಿತ್ತು. ಯಾವಾಗಲಾದರೂ ಒಮ್ಮೆ ಸಣ್ಣ ಮಗುವಿನ ಹಾಗೇ ಆ ಹಕ್ಕಿ ಕೂಗಿದರೆ, ಅಮ್ಮ ನನ್ನನ್ನು ಸರಕ್ಕನೆ ಮನೆಯೊಳಗೆ ತಳ್ಳಿ, ಬಾಗಿಲು ಹಾಕಿ 'ಏನೋ ಅನಾಹುತ ಕಾದಿದೆ' ಅಂತ ಇನ್ನಿಲ್ಲದ ಆತಂಕಕ್ಕೆ ಒಳಗಾಗುತ್ತಿದ್ದರು. ಇಂಥ ಕಾಡೊಳಗೆ ಮಳೆ ಬಂದರೆ ಅದಿನ್ನೂ ಭಯಾನಕ. ಮೇ ತಿಂಗಳ ಕೊನೆ ಅಥವಾ ಜೂನ್ ತಿಂಗಳ ಮೊದಲವಾರದಲ್ಲಿ ಮಳೆಯ ಸೂಚನೆಗಳು ಕಪ್ಪು ಮೋಡಗಳ ಚಲನೆ ಮತ್ತು ಗುಡುಗುಗಳ ಸದ್ದಿನಿಂದ ಆರಂಭವಾಗುತ್ತವೆ. ಕೆಲ ದಿನಗಳ ಅನಂತರ ಕಾಡೊಳಗೆ ಬೀಸುವ ಗಾಳಿ, ಪಂಜೆಯವರು ಬರೆದಂತೆ- 'ಬುಸುಗುಟ್ಟುವ ಪಾತಾಳದ ಹಾವೋ, ಹಸಿವಿನ ಭೂತದ ಕೂಯುವ ಕೂವೋ...' ಗಾಳಿ ಕೊನೆಯಾಗುತ್ತಿದ್ದಂತೆ ಮಳೆ ಸುರುವಾಗುತ್ತದೆ. ಆಲಿಕಲ್ಲಿನ ಹಾಗಿರುವ ಮಳೆ ಹನಿ ಸದ್ದುಮಾಡುತ್ತಾ ಭೂಮಿಗೆ ಬಿದ್ದಾಗ ಕರಿಮಲೆಯ ಕಾಡೇ ಬೆಚ್ಚಿ ಬೀಳುತ್ತದೆ. ಹಗಲೇ ಕತ್ತಲಾಗುವ ಕರಿಮಲೆಯ ಕಾಡಲ್ಲಿ ರಾತ್ರಿ ಹೇಗಿರಬಹುದೆಂದು ಊಹಿಸುವುದೂ ಕಷ್ಟ. ಜೂನ್ ತಿಂಗಳಲ್ಲಿ ಸುರಿಯುವ ಮೃಗಶಿರಾ ಮಳೆಗೆ ಪ್ರಾಣಿಗಳ ತಲೆಯೇ ತುಂಡಾಗುವುದಂತೆ. ಹಾಗೆಯೇ ಜುಲಾಯಿ ತಿಂಗಳಲ್ಲಿ ಬರುವ ಆರಿದ್ರಾ ಮಳೆಯ ಆರ್ಭಟೆಗೆ ಬೆಚ್ಚಿ ಬೀಳದವರಿಲ್ಲ. ಈ ಮಳೆಗಾಳಿಗೆ ನಡುರಾತ್ರಿಯಲ್ಲಿ ಧರೆಗೊರಗುವ ಮರಗಳ ಸದ್ದಿಗೆ ಮನೆಯೊಳಗೆ ಅಮ್ಮನ ಮಡಿಲಲ್ಲಿ ಬೆಚ್ಚಗೆ ಮಲಗಿದ್ದ ನಾನು ಬೆಚ್ಚಿ ಬೀಳುತ್ತಿದ್ದೆ. ಆ ಮರಗಳು ನೆಲಕ್ಕೊರಗುವಾಗ ತನ್ನೊಡನೆ ಇತರ ಮರಗಳನ್ನೂ ಬರಸೆಳೆದುಕೊಂಡು ನೆಲಕ್ಕೊರಗಿಸುತ್ತವೆ. ಮರಗಳನ್ನು ಗಾಢವಾಗಿ ಅಪ್ಪಿಕೊಂಡಿರುವ ಬಳ್ಳಿಗಳಿಗೂ ಉಳಿಗಾಲವಿಲ್ಲ. ಒಂದು ಮರವನ್ನು ಅಪ್ಪಿಕೊಂಡು ಮೇಲೇರುವ ಬೃಹತ್ ಬಳ್ಳಿಗಳು ಮತ್ತಷ್ಟು ಮೇಲೇರುತ್ತಲೇ ಇನ್ನೊಂದು ಮರದ ಕಡೆಗೆ ಚಾಚಿಕೊಂಡು ವಿಸ್ತಾರವಾಗಿ ಚಪ್ಪರದ ಹಾಗೆ ಬೆಳೆಯುತ್ತವೆ. ಹೀಗಾಗಿ ಮಳೆಗಾಳಿಗೆ ಒಂದು ಮರ ಬಿದ್ದರೆ, ಆ ಬಳ್ಳಿಗಳು ಇನ್ನೊಂದನ್ನು ಅಪ್ಪಿಕೊಂಡು ನೆಲಕ್ಕೊರಗುತ್ತವೆ. ಆಗ ಮರದ ಮೇಲೆಯೋ ಬಳ್ಳಿಗಳ ಮೇಲೆಯೋ ಆಶ್ರಯ ಪಡೆದಿದ್ದ ಕೆಲವು ಹಕ್ಕಿಗಳು ಮತ್ತು ಪ್ರಾಣಿಗಳು ವಿಚಿತ್ರವಾಗಿ ಕಿರುಚಿಕೊಳ್ಳುತ್ತವೆ. ಅದೇನು ಆಕ್ರಂದನವೋ, ಭಯವೋ ತಿಳಿಯದು. ಆದರೆ ನಡುರಾತ್ರಿಯಲ್ಲಿ ಅವು ವಿಚಿತ್ರ

